# 1 ನೇ ಅಪರ ಜಿಲ್ಲಾ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## Spl.C. 445/2018

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಡಿ ಕೆ ಹರೀಶ್ | ಫ್ರಾಸಾ: | 2 |
| ತಂದೆ ಹೆಸರು | : | ಲೇಟ್ ದೇವರಾಜೇಗೌಡ | ಚಾಸಾ: | 2 |
| ವಯಸ್ಸು | : | 47 ವರ್ಷ | ಸಾಕ್ಷಿಯು ಪ್ರಮಾಣ ಮಾಡಿದ ದಿ:24.11.2025 | |
| ವೃತ್ತಿ | : | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು | | |
| ವಾಸ ಸ್ಥಳ | : | ಮೈಸೂರು | | |

**ಮುಖ್ಯ ವಿಚಾರಣೆ: ಸರಕಾರಿ ಅಭಿಯೋಜಕರವರಿಂದ**:

1. ನಾನು 2010 ರಿಂದ 2016 ರವರೆಗೆ MUDA ನಲ್ಲಿ ಸಹಾಯಕ ಅಭಿಯಂತರರಾಗಿ (ವಿದ್ಯುತ್) ಕರ್ತವ್ಯ ನಿರ್ವಹಿಸಿರುತ್ತೇನೆ. ಚಾಸಾ-1 ರವರು ಉದಯಗಿರಿ ಘಟಕದಲ್ಲಿ CESC ನಲ್ಲಿ ಸಹಾಯಕ ಅಭಿಯಂತರರಾಗಿ ಮತ್ತು ಚಾಸಾ-3 ರವರು ಕಿರಿಯ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

2. ನರ್ಮ ಯೋಜನೆಯಡಿಯಲ್ಲಿ MUDA ವತಿಯಿಂದ ಹಾಲಿಯಿರುವ 4 ಪಥದ ಹೊರ ವರ್ತುಲ ರಸ್ತೆ (ring road)ಯನ್ನು 6 ಪಥದ ರಸ್ತೆಯನ್ನಾಗಿ ನಿರ್ಮಾಣ ಮಾಡುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಯಿತು. ಈ ರಸ್ತೆಯ ಅಗಲೀಕರಣ ಕಾಮಗಾರಿಯು ಕೊಲಂಬಿಯ ಏಷಿಯಾ ಆಸ್ಪತ್ರೆ ಕಡೆಯಿಂದ ಬನ್ನೂರು ವೃತ್ತದವರೆಗೆ ಪ್ರಗತಿಯಲ್ಲಿತ್ತು. ಕಾರಣ ಸಿವಿಲ್ ಕಾಮಗಾರಿಗೆ ಅಡ್ಡಲಾಗಿರುವ ವಿದ್ಯುತ್ ಮಾರ್ಗಗಳನ್ನು ಸ್ಥಳಾಂತರಿಸುವ ಕಾಮಗಾರಿಯನ್ನು ಟೆಂಡರ್ ಮೂಲಕ ಶ್ರೀ ಅರವಿಂದ ಎಲೆಕ್ಟ್ರಿಕಲ್ಸ್, ಬೆಂಗಳೂರು ರವರಿಗೆ ನೀಡಲಾಗಿತ್ತು.

3. ಈ ಕಾಮಗಾರಿಯ ಪರಿಶೀಲನೆಗೆಂದು ನಾನು ಸ್ಥಳಕ್ಕೆ ಹೋಗಿ ನೋಡಿದಾಗ ರಾಜೀವ್ ನಗರ 3 ನೇ ಹಂತದಿಂದ ಕಾಮನಕೆರೆ ಹುಂಡಿ ಕೂಡು ರಸ್ತೆಯವರೆಗೆ ಈ ಹಿಂದೆ ವಿದ್ಯುತ್ ಗುತ್ತಿಗೆದಾರರು ಅಳವಡಿಸಿ ಕಾಮಗಾರಿಯನ್ನು ಪೂರ್ಣಗೊಳಿಸಿದ್ದ ಸುಮಾರು 1100 ಮೀಟರ್

ಗಳಷ್ಟು ಉದ್ದದ 11 KVAB ವಿದ್ಯುತ್ ಕೇಬಲ್ ನ್ನು ಯಾರೋ ಕಳ್ಳರು ಕತ್ತರಿಸಿಕೊಂಡು ಹೋಗಿರುವುದು ಕಂಡು ಬಂದಿರುತ್ತದೆ. ನಂತರ ಈ ವಿಚಾರವನ್ನು ಸಂಬಂಧಿಸಿದ CESK ಅಭಿಯಂತರರಾದ ಚಾಸಾ–1 ರವರಿಗೆ ನಾನು ತಿಳಿಸಿರುತ್ತೇನೆ. ನಂತರ ಚಾಸಾ–1 ರವರು ಬಂದು ನನ್ನ ಸಮಕ್ಷಮ ಸ್ಥಳ ಪರಿಶೀಲನೆ ಮಾಡಿ ನಂತರ ಉದಯಗಿರಿ ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ.

4. ದಿಃ 20.07.2012 ರಂದು ಸಮಯ ಬೆಳಿಗ್ಗೆ 9.30 ಯಿಂದ 10.30 ವರೆಗೆ ಚಾಸಾ–1 ರವರು ಸ್ಥಳ ತೋರಿಸಿದ ಮೇರೆಗೆ, ಉದಯಗಿರಿ ಪೊಲೀಸರು ಸ್ಥಳದಲ್ಲಿ ಮಹಜರ್ ಮಾಡಿರುತ್ತಾರೆ. ಅ ಸಮಯದಲ್ಲಿ ನಾನು, ಚಾಸಾ–3 ಮತ್ತು ಸಿದ್ದಪ್ಪ ಎಂಬುವವರು ಸಹ ಹಾಜರಿದ್ದು ಮಹಜರ್ ಗೆ ಸಹಿ ಮಾಡಿದ್ದೇವೆ. ಮಹಜರ್ ನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ.2(ಬಿ)** ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲು ಃ**

ಆರೋಪಿ ಪರ ವಕೀಲರು ಸಮಯ ಕೇಳಿದ್ದು, ಇದು ಹಳೆಯ ಕೇಸ್ ಆಗಿರುವುದರಿಂದ ಆರೋಪಿ ಪರ ವಕೀಲರ ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಃ ಇಲ್ಲ

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು